ಶ್ರೀ ಬಿ. ಪಿ. ಗಂಗಾಧರ್.—ಕಾನೂನು ಪ್ರಕಾರ ಮೂರು ವರ್ಷವಾದ ಕೂಡಲೇ ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಇಲ್ಲಿ ಕಾನೂನು ಪ್ರಕಾರ 6 ವರ್ಷವಾಗಿದೆ. ಇದು ನಿಮ್ಮ ಇಲಾಖೆಯ ಇನ್ ಎಫಿಶೀಯನ್ಸಿಯನ್ನು ಪ್ರೂವ್ ಮಾಡುವುದಿಲ್ಲವೇ ?

ಶ್ರೀ ಕೆ. ಲಕ್ಕಪ್ಪ.—ಆ ವಿಚಾರ ಈಗ ತಾನೇ ಗಮನಕ್ಕೆ ಬಂದಿದೆ. ಮುಂದೆ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್.—ಉತ್ತರದಲ್ಲಿ ಈಗತಾನೇ ನನ್ನ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಆದರೆ ಬೆಂಗಳೂರು ಕಾರ್ಪರೇಶನ್ ಇಂಜಿನಿಯರ್ಸ್ ಮತ್ತು ಇತರರ ಟ್ರಾನ್ಸ್‌ಫರ್ ಬಗ್ಗೆ ನಿಮ್ಮ ಗಮನಕ್ಕೆ ಅನೇಕ ಬಾರಿ ತಂದರೂ ಕೂಡ, ಅವರನ್ನು 10-12 ವರ್ಷ ಅಲ್ಲಯೇ ಇಡಲು ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಗಮನಕ್ಕೆ ಬಂದರೆ ಅದನ್ನು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ಬೆಂಗಳೂರು ಕಾರ್ಪರೇಶನಿನ ಹಲವಾರು ಅಧಿಕಾರಿಗಳನ್ನು ಟ್ರಾನ್ಸ್‌ಫರ್ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೋದ ಸಾರಿ ಬಜೆಟ್ ಭಾಷಣದಲ್ಲಿ ಈ ಸುಪರ್‌ವೈಸರಿ ಅಧಿಕಾರಿಗಳ ಬಗ್ಗೆ ಬಹಳ ಹೇಳಿದ್ದೇನೆ. ಅದಕ್ಕೆ ಮಂತ್ರಿಯವರು ಪಟ್ಟಿ ಮಾಡಿ ಕೊಡಿ ವಿಚಾರಿಸುತ್ತೇನೆ ಎಂದು ಹೇಳಿದ್ದಾರೆ. ಆದರೆ ಗುಂಡ್ಲುಪೇಟೆಯಲ್ಲಿರುವ ಈ ಅಧಿಕಾರಿಗಳನ್ನು ಇಷ್ಟರ ವರಗೂ ಟ್ರಾನ್ಸ್‌ಫರ್ ಮಾಡದಿರಲು ಕಾರಣವೇನು ?

ಶ್ರೀ ಕೆ. ಲಕ್ಕಪ್ಪ.—ಸೂಪರ್‌ವೈಸರುಗಳನ್ನು ಸರ್ವೇಸಾಮಾನ್ಯವಾಗಿ ಒಂದು ಡಿವಿಜನಿಂದಾಗಲಿ, ಸರ್ಕಲಿನಿಂದಾಗಲಿ, ಪದೇ ಪದೇ ಬದಲಾಯಿಸುವುದಿಲ್ಲ. ಕಾರಣವೇನೆಂದರೆ, ಅವರು ಸಣ್ಣ ಅಧಿಕಾರಿಗಳು ಮತ್ತು ಅವರ ಸಂಬಳ ಕೂಡ ಕಡಿಮೆ. ಆದ್ದರಿಂದ ಅವರನ್ನು ಹಾಗೆ ಟ್ರಾನ್ಸ್‌ಫರ್ ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ, ಆದರೆ ಅನಿವಾರ್ಯವಾದ ಸಂದರ್ಭಗಳಲ್ಲಿ ಮಾತ್ರ ವರ್ಗ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮೂರು ವರ್ಷಗಳ ನಂತರ ಒಬ್ಬನನ್ನು ಟ್ರಾನ್ಸ್‌ಫರ್ ಮಾಡಬೇಕಾಗುತ್ತದೆ. ಇಲ್ಲ ಈಗ 6 ವರ್ಷದವರೆಗೂ ಇದ್ದಾರೆಂದು ಹೇಳಿದ್ದೀರಿ. ಹಾಗೆ ಇದ್ದುದಕ್ಕೆ ಸರ್ಕಾರದ ಅನುಮತಿಯನ್ನು ಪಡಕೊಳ್ಳಬೇಕಾಗಿತ್ತು, ಪಡಕೊಂಡಿಲ್ಲ. ಇದರಲ್ಲಿ ಒಂದಾ ನೀವು ಮೂರು ವರ್ಷವಾದ ನಂತರ ಟ್ರಾನ್ಸ್‌ಫರ್ ಮಾಡಬೇಕು, ಇಲ್ಲವೇ, ಆ ಅಧಿಕಾರಿಯೇ ಮೂರು ವರ್ಷಕ್ಕಿಂತ ಹೆಚ್ಚಾಗಿ ಇದ್ದರೆ, ಅವನ ತಪ್ಪಾಗುತ್ತದೆ. ಆದ್ದರಿಂದ ಈ ರೀತಿ ಅವನು ತಪ್ಪು ಮಾಡಿದರೆ ಯಾವ ಕ್ರಮ ತೆಗೆದುಕೊಳ್ಳುತ್ತೀರಿ ಅಥವಾ ನೀವೇ ಅವನನ್ನು ಟ್ರಾನ್ಸ್‌ಫರ್ ಮಾಡದಿದ್ದರೆ, ನಿಮ್ಮ ಮೇಲೆ ಯಾವ ರೀತಿ ನಾವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿ.

ಶ್ರೀ ಕೆ. ಲಕ್ಕಪ್ಪ.—ಯಾರು ಈ ಟ್ರಾನ್ಸ್‌ಫರನ್ನು ಮಾಡಬೇಕಾಗಿತ್ತು, ಮತ್ತು ಯಾರು ರೀಜೈನ್ ಮಾಡಿದ್ದಾರೆ, ಎಂಬುದನ್ನು ಎಲ್ಲಾ ವಿಚಾರಮಾಡಿದ ಮೇಲೆ ಏನಾದರೂ ಸೂಕ್ತ ಕಾರ್ಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಆದರೆ ಮೊದಲು ಏನೂ ಮಾಡಲಾಗುವುದಿಲ್ಲ.

Mr. SPEAKER.—Question Nos. 40 and 169 may be taken up together.

Non-availability of Text Books

40. **Sri B. B. SAYANAK** (Belgaum).—

Will the Minister for Education be pleased to state :—

(a) whether it is a fact that Marathi and Urdu books on Social Studies, General Mathematics and General Science prescribed for Standards VI, VIII, XI and X were not available at the Government District Book Depot up to 25th June 1970 ;

(*b*) whether it is a fact that the English Text Book prescribed for Standards VIII and X were also out of stock by 8th June 1970;

(*c*) whether it is a fact that the books of Social Studies, General Mathematics and General Science prescribed for Standards VIII and Kannada, Marathi and Urdu Books prescribed for Standard X were not available up to 8th June 1970;

(*d*) if so, whether the abovementioned books would be made available this year;

(*e*) the authority responsible for non-availability of these books?

Sri K. V. SHANKARA GOWDA (Minister for Education).—

(*a*) Yes.

(*b*) No; they were available in adequate numbers.

(*c*) Yes.

(*d*) Yes, in fact, they have already been released on 25th June 1970.

(*e*) The question does not arise in view of reply to clause (*d*) above.

Non-availability of Marathi Text Books

169. Sri B. P. KADAM (Karwar).—

Will the Minister for Education be pleased to state :—

(*a*) whether it is a fact that Marathi Text Books for Standards VII, IX and X in (i) Social Studies, (ii) General Mathematics, (iii) General Science, and (iv) Sanskrit are not still available;

(*b*) if so, the steps taken to supply these Text Books to the students?

Sri K. V. SHANKARA GOWDA (Minister for Education).—

(*a*) Yes.

(*b*) The translation into Marathi of these three Text Books and their printing and distribution work has already been entrusted to private publishers and they will be made available well in advance during the academic year 1971-72.

Sir, there is one modification in the printed answer. In reply to Question No. 40 (d) it is stated that they have already been released on 25th June 1970. It is not correct. The books would be released early in the next academic year.